ಎಂದು ಹೇಳಿದ್ದೀರಿ. ಆದೇ ರೀತಿ ದಕ್ಷಿಣಕನ್ನಡ ಜಿಲ್ಲೆಗೆ ಬದಲಾಗಿ ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟ ಕಾರ್ಖಾನೆಗಳನ್ನು ಪ್ರಾರಂಭಮಾಡಿ ಏಕೆ ಮಾಡಬಾರದು ?

೧೨-೦೫ ಪಿ. ಎಮ್.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ದಕ್ಷಿಣ ಕನ್ನಡ ಜಿಲ್ಲೆಗೂ ಆಯಿಲ್ ತೆಗೆಯುವ ತಕ್ಕ ಕೊಬ್ಬರಿಗೆ ಬೆಂಬಲ ಬೆಲೆ ೧೬೦೦ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಂಡಳಿ ಮೂಲಕ, ರಾಷ್ಟ್ರೀಯ ಕೃಷಿ ಉತ್ಪಾದನಾ ಮಾರಾಟ (NAFED) ಮಹಾಮಂಡಳಿಯವರು ಜಂಟಿ ವ್ಯವಹಾರದಲ್ಲಿ ಕೊಳ್ಳುತ್ತಿದ್ದಾರೆ. ಇದರಿಂದ, ಅಲ್ಲಿಯ ರೈತರಿಗೆ ಬೆಲೆ ಬಿದ್ದು ಹೋಗಿದೆ ಎಂಬ ಭಾವನೆ ಇಲ್ಲ. ಅಲ್ಲಿ ಸಾಕಷ್ಟು ಸಮಾಧಾನಕರವಾಗಿ ಈ ಮಾರ್ಕೆಟ್‌ನಿಂದ ವ್ಯವಸ್ಥೆ ಮಾಡಲಾಗಿದೆ. ಆದರೆ, ತುಮಕೂರು, ಹಾಸನ, ಚಿತ್ರದುರ್ಗ ಈ ಭಾಗದಲ್ಲಿ ಒಣ ಕೊಬ್ಬರಿ ಮಾರಾಟಕ್ಕೆ ವ್ಯವಸ್ಥೆ ಇದೆ. ಇದಕ್ಕೆ ಹೆಚ್ಚು ಬೆಲೆ ಕೊಡಬೇಕಾಗುತ್ತದೆ. ೨,೫೦೦ ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಡಬೇಕೆಂದು ರಾಜ್ಯಸರ್ಕಾರ ಅಂದಿನ ವ್ಯವಸಾಯ, ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಕೇಂದ್ರಕ್ಕೆ ಶಿಫಾರಸ್ ಮಾಡಿದ್ದಾರೆ. ಕೇಂದ್ರದವರೂ ಕೂಡ ಈ ಶಿಫಾರಸ್ಸಿನ ಹಿನ್ನೆಲೆಯಲ್ಲಿ ೧೩-೧೧-೮೦ ರಂದು ಒಂದು ಸಭೆ ಮಾಡಿದ್ದಾರೆ. ನಮ್ಮ ಅಧಿಕಾರಿಗಳೂ ಕೂಡ ೨,೦೦೦ ರೂ. ಗಳ ಒಣಕೊಬ್ಬರಿಯು ದರದಿಂದ ರೈತರಿಗೆ ಲಾಸ ಆಗುತ್ತದೆ ಎಂದು ಹೇಳಿರುವುದರ ಮೇರೆಗೆ ಕೇಂದ್ರ ಸರ್ಕಾರದವರು ಶೀಘ್ರದಲ್ಲಿಯೇ ಪರಿಶೀಲಿಸುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿದ್ದಾರೆ ಈ ದಿಸೆಯಲ್ಲಿ ಎರಡು ವಿಧವಾದ ಕೊಬ್ಬರಿ ಬರುತ್ತದೆ. ಒಂದು ಎಣ್ಣೆಯನ್ನು ತೆಗೆಯುವ ತಕ್ಕ ಕೊಬ್ಬರಿ, ಮತ್ತೊಂದು ಒಣ ಕೊಬ್ಬರಿ. ಈ ಒಣ ಕೊಬ್ಬರಿಗೆ ಬೆಲೆಯನ್ನು ಜಾಸ್ತಿ ಮಾಡುವ ಬಗ್ಗೆ ಕೇಂದ್ರದವರ ಜೊತೆ ವ್ಯವಹರಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ವಿಷಯ : ತುರುವೇಕೆರೆ ಜಿಲ್ಲಾ ಪರಿಷತ್ತಿನ ಇಂಜನಿಯರಿಂಗ ವಿಭಾಗದಲ್ಲಿ ನಡೆದಿರುವ ಹಣದ ದುರುಪಯೋಗ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೬೦೭ (೬೭೮)

ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

ಆ) ತುರುವೇಕೆರೆಯಲ್ಲಿರುವ ಜಿಲ್ಲಾ ಪರಿಷತ್ತಿನ ಇಂಜನಿಯರಿಂಗ್ ವಿಭಾಗದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ದುರುಪಯೋಗವಾಗಿರುವ ಹಣವೆಷ್ಟು ? ಹಾಗೂ ಅದಕ್ಕೆ ಕಾರಣಗಳೇನು ?

ಇ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ ಬಸನಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-

ಅ) ಹೌದು

ಆ) ಸುಮಾರು ರೂ. ೧,೭೫,೫೬೯-೦೦ (ಆಹಾರ ಧಾನ್ಯಗಳು) ದಾಸ್ತಾನಿನಲ್ಲಿ ಆಹಾರ ಧಾನ್ಯಗಳು ಕಡಿಮೆ ಇರುವುದು.

ಇ) ಪ್ರಕರಣವನ್ನು ತನಿಖೆಗಾಗಿ ಲೋಕಾಯುಕ್ತಕ್ಕೆ ವಹಿಸಲು ಅಥವಾ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲು ಅವಶ್ಯಕ ಮಾಹಿತಿ ಗಳನ್ನು ಒದಗಿಸುವಂತೆ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ತು ತುಮಕೂರು ಜಿಲ್ಲೆಯವರನ್ನು ಕೋರಲಾಗಿದೆ.

ಶ್ರೀ ಎಸ್. ರುದ್ರಪ್ಪ : ಅಧ್ಯಕ್ಷರೇ ತುರುವೇಕೆರೆ ಜಿಲ್ಲಾ ಪರಿಷತ್ ವಿಭಾಗದಲ್ಲಿ ಆದಂಥ ದುರುಪಯೋಗದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ೧,೭೫,೫೬೯ ರೂಪಾಯಿಗಳು ಆಹಾರಧಾನ್ಯಗಳಿಂದ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಅಲ್ಲಿ ಆಹಾರಧಾನ್ಯಗಳಿಂದ ದುರುಪಯೋಗವಾಗಿಲ್ಲ. ಕಬ್ಬಿಣ ಮತ್ತು ಸಿಮೆಂಟ್ ಹಾಗೂ ಪೈಪುಗಳಲ್ಲಿಯೂ ದುರುಪಯೋಗವಾಗಿದೆ. ಅದೇ ರೀತಿ ಒಂದು ಲೋಡ್ ಅಕ್ಕಿಯನ್ನು ತುರುವೇಕೆರೆಯಿಂದ, ಕುಣಿಗಲ್‌ಗೆ ಕಳುಹಿಸಬೇಕಾದರೆ, ಒಂದು ಲೋಡ್‌ಗೆ ೫,೧೫೫ ರೂಪಾಯಿಗಳ ಬಾಡಿಗೆಯನ್ನೂ ಸಹ ಆ ಇಂಜಿನಿಯರ್ ಖರ್ಚು ಹಾಕಿದ್ದಾರೆ. ಈ ರೀತಿಯ ದುರುಪಯೋಗ ಆಗಿ ಸುಮಾರು ೩ ವರ್ಷವಾಗಿದೆ. ಈ ರೀತಿ ಎರಡು ವರ್ಷವಾಗಿದ್ದರೂ ಸಹ ಆ ಅಧಿಕಾರಿಯ ಮೇಲೆ ಕ್ರಮ ತೆಗೆದು ಕೊಂಡಿಲ್ಲ ತನಿಖೆ ಮಾಡಿಲ್ಲ. ಈಗ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊ ಳ್ಳುತ್ತೀರಾ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಬಿ. ಬಸನಲಿಂಗಪ್ಪ :- ತೆಗೆದುಕೊಳ್ಳುತ್ತೇವೆ.

**ವಿಷಯ : ರಾಯಚೂರಿನಲ್ಲಿರುವ ಕೃಷಿ ಕಾಲೇಜಿನ ಕಟ್ಟಡ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೦೯ (೭೭೪)

ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಕೃಷಿ ಮತ್ತು ತೋಟ ಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?